> ಮೃತ್ಯೂವಿನೊಂದಿಗೆ ಲಗ್ಣವನ್ನು ಯಾವ ತೆರನಾಗಿಯೂ ನಿಲ್ಲಿಸಲು ಅವಳಿಗೆ ಸಾಧ್ಯವೇ ಇರಲಿಲ್ಲ. ಅವ್ವನೇ ತನ್ನವಳಾಗಲು ಹಿಂಜರಿದು ನಿಲ್ಲುತ್ತಾಳೆ ಎಂದರೆ ಆ ಹೆಣ್ಣಿನ ದುಃಖ ಆಲಿಸುವವರು ಯಾರು? “ಪ್ರಪಂಚದ ಯಾವ ಜೀವಿಯನ್ನೂ ಯಾರ ಋಣದಲ್ಲೂ ಇರಿಸಬ್ಯಾಡಪ್ಪ ಶಿವನೇ” ಗೌರಿ ನಿಟ್ಟುಸಿರು ಬಿಡುತ್ತಾ ಕೇಳಿಕೊಳ್ಳುವುದೊಂದೇ ದೇವರಲ್ಲಿ.

ಲೆಕ್ಕ ಅವನಲ್ಲಿಲ್ಲ. ಅದೆಂಥ ದಿವ್ಯ ನಿರ್ಲಕ್ಷ್ಯ ಅವನದು. ಎಲ್ಲಕ್ಕೂ ಅಕ್ಕನನ್ನೇ ಕರೆಯುತ್ತಾನಾತಾ! ಎಣೇಲಿ ಸೊಣೇಲಿ ಅವ್ವ ಕೈ ಬಿಡುವಿಲ್ಲದೆ ‘ಕೊಟ್ಟುಬುಡು ಗೌರಿ’ ಎಂದು ಕೊಡುವ ಒಂದು ಲೋಟ ನೀರನ್ನೂ ಅವಾ ಅವಳ ಕೈಯಿಂದ ತೆಗೆದುಕೊಳ್ಳಲಾರ. ಉರಿಗಣ್ಣು ಬಿಟ್ಟು ತಾನೇ ಮತ್ತೊಂದು ಲೋಟದಲ್ಲಿ ನೀರು ತಗೊಂಡು ಕುಡಿದು ಪಟ್ಟೆಂದು ಸದ್ದಾಗುವಂತಿಟ್ಟು ಹೊಂಟು ಬಿಡುತ್ತಾನೆ. ಇದೆಲ್ಲ ಅವ್ವ ಮತ್ತು ತಾತನಿಗ್ಯಾಕೆ ಅರ್ಥವಾಗುತ್ತಿಲ್ಲ. ಗೌರಿ ಬಹಳವೇ ನೊಂದುಕೊಳ್ಳುತ್ತಾಳೆ.

‘ನಂಗೆ ಈ ಲಗ್ಣ ಬ್ಯಾಡ ಕವ್ವ’ ಅರ್ಧರಾತ್ರಿಯಲ್ಲಿ ಪಕ್ಕದಲ್ಲಿ ಮಲಗಿದ್ದ ಅವ್ವನ ಅಲ್ಲಾಡಿಸಿ ಎಚ್ಚರ ಮಾಡಿ ಗೌರಿ ಸಣ್ಣ ಧ್ವನಿಯಲ್ಲಿ ನುಡಿದು ಕುಸುಕುಸು ಅಳತೊಡಗಿದ್ದಳು. ಪಾರೋತಕ್ಕ ಮೊಕದ ತುಂಬಾ ಹೊದಿಕೆ ಎಳದು ಕೈಯಿಂದ ಬಾಯಿ ಮುಚ್ಚಿದ್ದಳು. ‘‘ಕರದು ಯೆಣ್ಣು ಕೊಟ್ರೆ ಮೊಲ್ಲಾಗರ’ ಅಂದಾಗೆ ಆಯ್ತು. ನಿಂಗೂ ನಂಗೂ ಯಾರ್ ದಿಕ್ಕಿದ್ದಾರವ್ವ ಗೌರಿ. ನಾ ಇರಾ ತಂಕಾ ಸರಿ. ಅಮ್ಯಾಕ್ಕೆ. ನಾ ಸತ್ತೆ ಅಂದ್ರೆ ಮೃತ್ಯೂ ನಿನ್ನ ಅಡ್ಕೆ ಕಡಿದು ಎಲೆ ಹಾಕ್ಕಳ ತಂಕನಾರೂ ಇಲ್ಲಿ ಇರಿಸಿಗಂಡಾನಾ? ನಂಗೂ ಎಲ್ಲ ಗೊತ್ತಾಯ್ತದೆ. ದೇವ್ರು ನಮಗೆ ಇಂಥ ಸ್ಥಿತೀಲಿ ಇಟ್ಟೋನೆ. ವಳ್ಳೇದು ಮಾಡ್ತಾನೆ ಸುಮ್ಕಿರು. ತಾಳಿ ಅನ್ನಾದು ಒಂದು ಕುತ್ಗೆಗೆ ಬಿದ್ರೆ ಮೃತ್ಯೂ ಈಗ ನಡಕಳ್ಳ ಹಂಗೆ ನಡ್ಕಂಡಾನಾ. ಎಲ್ಲ ಸರಿಯಾಯ್ತದೆ. ಹುಡುಗು ಬುದ್ಧೀಲಿ ಹಂಗಾಡ್ತನೆ ಅಷ್ಟೇಯಾ? ಇದ್ಯಾ ಅನ್ನೋರಿಲ್ಲ ಸತ್ಯಾ ಅನ್ನೋರಿಲ್ಲ. ಈ ಬದುಕ್ನೇ ಅಂಟಿಸಿಕೊಂಡು ಕೊನೇಗಂಟಾ ಏಗಬೇಕು ಕಣವ್ವಾ ಗೌರಿ. ಬೇಕು ಬ್ಯಾಡಾ ಅನ್ನಾ ಅಕ್ಕು ಎಲ್ಲಿದ್ದದು ನಮ್ಗೆ. ಮೃತ್ಯೂನೂ ಒಳ್ಳೇಯೋನೇ. ಒಳ್ಳೆದಾಯ್ತದೆ ಸುಮ್ನಿರು.”

ಹೊದಿಕೆಯೊಳಗಿನ ಗುಸುಗುಸು ಪಿಸಪಿಸದ ಮಾತುಗಳು ಒಂದಕ್ಕೊಂದು ಸಂಬಂಧವಿಲ್ಲದ ಜೋಡಣೆಗಳಂತೆ ಕಿವಿಯನ್ನು ಕೊರೆದಿದ್ದಷ್ಟೆ!

ಇತ್ತ ಮೃತ್ಯುವಾದರೂ ‘ಮೃತ್ಯುವಿನ ಹೆಂಡ್ತಿ’ ಎಂದು ನಗೆಸಾರ ಮಾಡುತ್ತಿದ್ದುದನ್ನೆ ಸಹಿಸದವ, ಈಗ ಮನೆಯಲ್ಲೆ ಲಗ್ಣದ ಮಾತಾಡುತ್ತಿದ್ದಾರೆ ಎಂದಾಗ ಅವನಲ್ಲಿ ಅಸಹ್ಯದ ವಾಕರಿಕೆಯೇ ಮೂಡಿತ್ತು. ಇವಳೇ ತನ್ನ ಹೆಂಡತಿಯಾಗಿಬಿಡುತ್ತಾಳಾ? ಅವನು ಮುಖ ತಿರುಗಿಸಿದ್ದ. ಅಲ್ಲಿ ದೈನೇಸಿ ಮುಖಹೊತ್ತು ಕುಂತ ಪಾರೋತಕ್ಕ ಕಂಡಿದ್ದಳು. ಲಗ್ನದ ಮಾತುಗಳು ಅವಳ ಕಣ್ಣಲ್ಲಿ ದೀಪವಾಗಿದ್ದವು. ಮೃತ್ಯು ತಲೆಕೆಟ್ಟವನಂತೆ ಹೊರಬಂದು ಬಿಟ್ಟಿದ್ದ. ಮೃತ್ಯೂವಿನ ಲಗ್ನ ಗೌರಿಯೊಂದಿಗೆ ಆಗಿಯೇ ಹೋಗಿತ್ತು. ಜೋಡಿ ನೋಡಿ ಪಿಸು ಮಾತನಾಡಿ ಮುಸಿಮುಸಿ ನಕ್ಕವರೇ ಹೆಚ್ಚು. ಅಣ್ಣಂದಿರ ಕುಟುಂಬಗಳು ಬಂದು ಬಲವಂತದ ಮಾಘಸ್ನಾನ ಮಾಡಿ ಹೋಗಿದ್ದವು. ಮೃತ್ಯೂನಂಥ ಉಂಡಾಡಿಗುಂಡ ದಿಕ್ಕು ತಪ್ಪಿ ಬಂದ ಅಕ್ಕ, ಮತ್ತವಳ ಮಗಳು – ಇವೆಲ್ಲ ಅವರ ಬದುಕುಗಳಲ್ಲಿ ಮಾನ ಮರ್ಯಾದೆಗೆ ಕುತ್ತು ತರುವ ವಿಚಾರಗಳೇ ಹೌದು. ಉಂಡು ಕೈ ತೊಳೆದ ನೀರು ಆರುವ ಮುನ್ನ ಕೆಲಸಗಳ ನೆಪ ಹೇಳಿ